## 2017 ಕ.ತೀ.ವ. 963

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

## ಶ್ರೀ ಎನ್.ಎಚ್. ಶಿವಮೂರ್ತಿ (ಮೃತ) ಈತನ ವಾರಸುದಾರರು –ವಿರುದ್ಧ– ಶ್ರೀ ಮಾರ್ಕ್ ಗೋಮೇಜ್ ಮತ್ತು ಇತರರು*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಮೊದಲನೇ ಎದುರುದಾರರು ಅಧಿವಿಚಾರಣಾ ನ್ಯಾಯಾಲಯದಲ್ಲಿ ಜಾರಿ ಅರ್ಜಿ ನಡಾವಳಿಗಳಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 21 ಕ್ರಮಾದೇಶ 97ರ ಜೊತೆಗೂಡಿದಂತೆ ಆದೇಶ 1 ಕ್ರಮಾದೇಶ 10(2)ರಡಿಯಲ್ಲಿ ಆದೇಶ 16 ಕ್ರಮಾದೇಶ 1(ಎ)ರಡಿಯಲ್ಲಿ ಮತ್ತು ಆದೇಶ 21 ಕ್ರಮಾದೇಶ 16ರ ಜೊತೆ ಕಲಂ 146ರಡಿ ಸಲ್ಲಿಸಿದ ಮೂರು ಪ್ರತ್ಯೇಕ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಿ ಆ ಎಲ್ಲಾ ಅರ್ಜಿಗಳನ್ನು ವಜಾಗೊಳಿಸುವಂತೆ ಕೋರಿ ಅರ್ಜಿದಾರರು ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿ ನೀಡಿದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ವಿವಿಧ ನ್ಯಾಯಾಲಯಗಳ ತೀರ್ಪನ್ನಾಧರಿಸಿದ ಉಚ್ಚ ನ್ಯಾಯಾಲಯವು ಎರಡನೇ ಎದುರುದಾರರು ಜಾರಿ ಅರ್ಜಿಯನ್ನು ಸಲ್ಲಿಸಿದ ಆರು ದಿನಗಳ ನಂತರ ಪ್ರತ್ಯೇಕ ದಾವೆಯನ್ನು ಹೂಡಿದ್ದರೂ, ಜಾರಿ ಅರ್ಜಿಯ ನಡವಳಿಗಳಲ್ಲಿ ಭಾಗವಹಿಸುವುದರಿಂದ ತಪ್ಪಿಸಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟ ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

---

* ರಿಟ್ ಅರ್ಜಿ ಸಂಖ್ಯೆ.: 8136–37/2015 ಮತ್ತು 8188–89/2015, ದಿನಾಂಕ: 30ನೇ ಜುಲೈ, 2015.

| *ಉಲ್ಲೇಖಿಸಲಾದ ಮೊಕದ್ದಮೆಗಳು:* | *ಪ್ಯಾರಾಗಳಲ್ಲಿ* |
|---|---|
| *1. ಎಐಆರ್ 1955 ಎಸ್‌ಸಿ 376<br>ಜುಗಲ್‌ಕಿಶೋರ್ ಸರಾಫ್ –ವಿರುದ್ಧ–<br>ಮೆ॥ ರಾ. ಕಾಟನ್ ಕಂ. ಲಿಮಿಟೆಡ್* | *(ಉಲ್ಲೇ) 10* |
| *2. (2004) 11 ಎಸ್‌ಸಿಸಿ 511<br>ಪಿ. ಜನಾರ್ಧನ ರಾವ್ –ವಿರುದ್ಧ–<br>ಕಣ್ಣನ್ ಮತ್ತು ಇತರರು* | *(ಉಲ್ಲೇ) 11* |
| *3. (1997) 3 ಎಸ್‌ಸಿಸಿ 694<br>ಬ್ರಾಮ್‌ಡಿಯೊ ಚೌಧರಿ –ವಿರುದ್ಧ– ರಿಷಿಕೇಶ್ ಪ್ರಸಾದ್<br>ಜೈಸ್‌ವಾಲ್ ಮತ್ತು ಇನ್ನೊಬ್ಬರು* | *(ಉಲ್ಲೇ) 17* |
| *4. (1998) 6 ಎಸ್‌ಸಿಸಿ 200<br>ಘಾಸಿರಾಮ್ –ವಿರುದ್ಧ– ಚೈತ್‌ರಾಂ ಸೈನಿ* | *(ಉಲ್ಲೇ) 18* |
| *5. (2015) 1 ಎಸ್‌ಸಿಸಿ 379<br>ಸಮೀರ್ ಸಿಂಗ್ ಮತ್ತು ಇನ್ನೊಬ್ಬರು –ವಿರುದ್ಧ–<br>ಅಬ್ದುಲ್ ರಾಬ್ ಮತ್ತು ಇತರರು* | *(ಉಲ್ಲೇ) 19* |
| *6. ಎಐಆರ್ 1998 ಎಸ್‌ಸಿ 1827(1)<br>ಶ್ರೀನಾಥ್ ಮತ್ತು ಇನ್ನೊಬ್ಬರು –ವಿರುದ್ಧ–<br>ರಾಜೇಶ್ ಮತ್ತು ಇತರರು* | *(ಉಲ್ಲೇ) 23* |
| *7. ಎಐಆರ್ 1995 ಎಸ್‌ಸಿ 358<br>ಬನ್‌ವರ್‌ಲಾಲ್ –ವಿರುದ್ಧ– ಸತ್ಯನ್ ರೈನ್* | *(ಉಲ್ಲೇ) 24* |
| *8. ಎಐಆರ್ 1996 ಎಸ್‌ಸಿ 2050<br>ಬಾಬುಲಾಲ –ವಿರುದ್ಧ– ರಾಜ್ ಕುಮಾರ್* | *(ಉಲ್ಲೇ) 25* |
| *9. ಎಐಆರ್ 2000 ಎಸ್‌ಸಿ 3567(II)<br>ಪ್ರಶಾಂತ ಬ್ಯಾನರ್ಜಿ –ವಿರುದ್ಧ–<br>ಪುಷ್ಪ ಅಶೋಕ ಚಾಂದನಿ* | *(ಉಲ್ಲೇ) 26* |

ಅರ್ಜಿದಾರರ ಪರವಾಗಿ : ಮೆಸರ್ಸ್ ಶಿವನ್ ಮತ್ತು ಶಿವನ್, ವಕೀಲರು ಇವರ ಪರವಾಗಿ ಕುಮಾರಿ ದಿವ್ಯ ಕೃಷ್ಣ, ವಕೀಲರು ;
2ನೇ ಪ್ರತ್ಯರ್ಜಿದಾರರ ಪರವಾಗಿ : ಕುಮಾರಿ ಪಿ.ಸಿ. ಸುನಿತಾ, ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ:**

ಮೂಲ ದಾವೆ ಸಂಖ್ಯೆ 674/2008ರಲ್ಲಿ ನೀಡಿದ ತೀರ್ಪು ಮತ್ತು ಡಿಕ್ರಿ ಪೈಕಿ ಉದ್ಭವಿಸಿದ ಜಾರಿ ಅರ್ಜಿ ಸಂಖ್ಯೆ 65/2010ರಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿರಿಯ ವಿಭಾಗ), ಬೆಂಗಳೂರು ಇವರು ನೀಡಿದ ಸಾಮಾನ್ಯ ಆದೇಶ ದಿನಾಂಕ 9.1.2015ನ್ನು ಪ್ರಶ್ನಿಸಿ ಭಾರತ ಸಂವಿಧಾನದ ಅನುಚ್ಛೇದ 227ರ ಅಡಿಯಲ್ಲಿ ಪ್ರಸ್ತುತ ಅರ್ಜಿಗಳನ್ನು ದಾಖಲು ಮಾಡಲಾಗಿದೆ.

2. ಇದರಲ್ಲಿನ 1ನೇ ಪ್ರತ್ಯರ್ಜಿದಾರರು ಶ್ರೀಮತಿ ಅರಸಿಲಾ, ಶ್ರೀ ಮಾರ್ಕೋಸ್, ಶ್ರೀ ಜಾನ್ ಜೆಫ್ರಿ ಮತ್ತು ಶ್ರೀ ಕಿಣಿ ಇವರ ಜಿಪಿಎದಾರರಾಗಿದ್ದಾರೆ. 2ನೇ ಪ್ರತ್ಯರ್ಜಿದಾರ, ಶ್ರೀ ಎನ್.ಎಚ್. ಕೃಷ್ಣಮೂರ್ತಿ, ಇವರು ಜಾರಿ ಅರ್ಜಿ ಸಂಖ್ಯೆ 65/2010ರಲ್ಲಿ ಅಪೀಲುದಾರನಾಗಿದ್ದಾನೆ ಮತ್ತು (1) ಹೆಚ್ಚುವರಿ ಡಿಕ್ರಿದಾರ (ಡಿಎಚ್ಆರ್)ಯಾಗಿ ಸ್ವತಃ ಪಕ್ಷಕಾರರನ್ನಾಗಿ ಮಾಡಲು ಸಿಪಿಸಿಯ ಆದೇಶ 21 ಕ್ರಮಾದೇಶ 97ನ್ನು ಓದಿಕೊಂಡು ಸಿಪಿಸಿಯ ಆದೇಶ 1 ಕ್ರಮಾದೇಶ 10(2)ರ ಅಡಿಯಲ್ಲಿ ಐ.ಎ.1ನ್ನು (2) ಸಾಕ್ಷಿದಾರರ ಪಟ್ಟಿಯನ್ನು ಒದಗಿಸುವುದಕ್ಕೆ ಅನುಮತಿಗಾಗಿ ಸಿಪಿಸಿಯ ಆದೇಶ 16 ಕ್ರಮಾದೇಶ 1(ಎ) ಅಡಿಯಲ್ಲಿ ಐ.ಎ.2ನ್ನು ದಾಖಲು ಮಾಡಿದ್ದಾನೆ ಮತ್ತು (3) ಈ ಪ್ರಕರಣವನ್ನು ವಾದಿಸುವುದಕ್ಕೆ ಹೆಚ್ಚುವರಿ ಡಿಎಚ್ಆರ್ಯಾಗಿ ಸ್ವತಃ ಸೇರ್ಪಡೆಗೊಳಿಸಿ ಸಿಪಿಸಿಯ ಆದೇಶ 1 ಕ್ರಮಾದೇಶ 16ರ ಅಡಿಯಲ್ಲಿ ಆತನು 3 ಅರ್ಜಿಗಳನ್ನು ದಾಖಲು ಮಾಡಿದ್ದಾನೆ. ಅರ್ಜಿದಾರನು ಸಿಪಿಸಿಯ ಆದೇಶ 21 ಕ್ರಮಾದೇಶ 97ನ್ನು ಓದಿಕೊಂಡು ಸಿಪಿಸಿಯ ಆದೇಶ 1

ಕ್ರಮಾದೇಶ 10(2)ನ್ನು ದಾಖಲು ಮಾಡಿದ ಐ.ಎ.1ನ್ನು ತಿರಸ್ಕರಿಸಿದ ಸಿಪಿಸಿಯ ಪ್ರಕರಣ 151ರ ಅಡಿಯಲ್ಲಿ ಡಿಎಚ್ಆರ್ ನಿಂದ ಐ.ಎ.3 ನ್ನು ದಾಖಲು ಮಾಡಲಾಗಿದೆ.

3. ಈ ಎಲ್ಲಾ ಅರ್ಜಿಗಳನ್ನು ಒಟ್ಟಿಗೆ ಪರಿಗಣಿಸಲಾಗಿದೆ ಮತ್ತು ದಿನಾಂಕ 9.1.2015ರಂದು ಮಾಡಿದ ಸಾಮಾನ್ಯ ಆದೇಶದ ಮೂಲಕ ಐ.ಎ.3ನ್ನು ತಿರಸ್ಕರಿಸಲಾಗಿದೆ ಮತ್ತು ಐ.ಎ.1, 2 ಮತ್ತು 4ನ್ನು ಅಂಗೀಕರಿಸಲಾಗಿದೆ. ಅದರಿಂದ ಬಾಧಿತರಾದ ಡಿಕ್ರಿದಾರರು, ಸದರಿ ಪ್ರಶ್ನಿತ ಆದೇಶದ ಸರಿತನ ಮತ್ತು ಕಾನೂನು ಸಮ್ಮತತೆಯನ್ನು ಪ್ರಶ್ನಿಸಿ ಈ ಅರ್ಜಿಗಳನ್ನು ದಾಖಲು ಮಾಡಿದ್ದಾರೆ.

4. ಜಾರಿ ಅರ್ಜಿಯನ್ನು ದಾಖಲು ಮಾಡುವುದಕ್ಕೆ ಮತ್ತು ದಿನಾಂಕ 9.1.2015ರಂದು ತತ್ಪರಿಣಾಮವಾದ ಆದೇಶಗಳನ್ನು ಹೊರಡಿಸುವುದಕ್ಕೆ ಪ್ರಮುಖವಾದ ಸಂಗತಿಗಳು ಮುಂದಿನಂತಿವೆ:

ಶ್ರೀ ಎನ್.ಜೆ. ಶಿವಮೂರ್ತಿ, ನೋಂದಾಯಿತ ನಿರುಪಾಧಿಕ ಕ್ರಯಪತ್ರವನ್ನು ಬರೆದುಕೊಟ್ಟ 1ನೇ ಪ್ರತ್ಯರ್ಜಿದಾರನ ವಿರುದ್ಧ ನಿರ್ದಿಷ್ಟ ಒಪ್ಪಂದ ಪಾಲನೆಗಾಗಿ ಮೂ.ದಾ. ಸಂ. 674/2008ರಲ್ಲಿ ದಾವೆಯನ್ನು ದಾಖಲು ಮಾಡಿದ್ದಾನೆ. ಸದರಿ ದಾವೆಯನ್ನು ರಾಜಿಯಲ್ಲಿ ಮುಕ್ತಾಯಗೊಳಿಸಲಾಗಿದೆ. ತನ್ನ ಕಾನೂನು ಪ್ರತಿನಿಧಿಗಳಾಗಿರುವ ಅದರಲ್ಲಿನ ಅರ್ಜಿದಾರರ ಹತ್ತಿರ ದಿನಾಂಕ 20.4.2010ರಂದು ಶಿವಮೂರ್ತಿ ಮೃತನಾಗಿರುತ್ತಾನೆ. ತದನಂತರ ಅದರಲ್ಲಿನ ಅರ್ಜಿದಾರರು, ದಿನಾಂಕ 4.1.2010ರಂದು ರಾಜಿ ಡಿಕ್ರಿಯಲ್ಲಿ ಮುಕ್ತಾಯಗೊಳಿಸಲಾದ, ಮೂ.ದಾ. 674/2008ರಲ್ಲಿ ಮಾಡಿದ ಆದೇಶವನ್ನು ಜಾರಿಗೊಳಿಸಲು ಕೋರಿ, ಜಿಪಿಎ ಡಿಕ್ರಿದಾರರಾದ ನಾಲ್ವರು ವ್ಯಕ್ತಿಗಳು ಅಂದರೆ, ಅರಸಿಲಾ, ಶ್ರೀ ಮಾರ್ಕೋಸ್, ಶ್ರೀ ಜಾನ್ ಜೆಫ್ರಿ ಮತ್ತು ಶ್ರೀ ಕಿಣಿ ಶ್ರೀ ಮಾರ್ಕ್ ಗೋಮೇಜ್ ವಿರುದ್ಧ ಜಾರಿ ಅರ್ಜಿ ಸಂಖ್ಯೆ 65/2010ನ್ನು ದಾಖಲು ಮಾಡಿದ್ದಾರೆ.

5. ಮೂ.ದಾ. ಸಂ. 674/2008ರ ದಾವೆಯಲ್ಲಿನ ವಿಷಯವೆಂದರೆ, ಸರ್ವೇ ನಂ.33 (ಹಳೇ ನಂ.5/4) ಪಟ್ಟಂದೂರು ಅಗ್ರಹಾರ ಗ್ರಾಮ, ಕೆ.ಆರ್.ಪುರಂ

ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕಿನಲ್ಲಿ 4.39 ಎಕರೆಗಳನ್ನು ಹೊಂದಿರುವ ಕೃಷಿ ಭೂಮಿಯಾಗಿದೆ. ದಿನಾಂಕ 4.1.2010ರಂದು ಸದರಿ ದಾವೆಯನ್ನು ರಾಜಿಯಲ್ಲಿ ಮುಕ್ತಾಯಗೊಳಿಸಲಾಗಿದೆ. ಸದರಿ ರಾಜಿ ಡಿಕ್ರಿಯ ಬಲದ ಮೇಲೆ, ಅರ್ಜಿದಾರರು, ನ್ಯಾಯಾಲಯದ ಏಜೆನ್ಸಿ ಮೂಲಕ ತಮ್ಮ ಹೆಸರಿನಲ್ಲಿ ಬರೆದುಕೊಡಬಹುದಾದ ಕ್ರಯಪತ್ರವನ್ನು ತಮ್ಮ ಹೆಸರಿಗೆ ಆಗುವಂತೆ ನಿಯತ ಕ್ರಯಪತ್ರವನ್ನು ಬರೆದುಕೊಡಲು ಜೆಡಿಆರ್‌ಗೆ ನಿರ್ದೇಶಿಸುವಂತೆ ಈ ನ್ಯಾಯಾಲಯವನ್ನು ಕೋರಿ ಜಾರಿ ವ್ಯವಹರಣೆಗಳನ್ನು ದಾಖಲು ಮಾಡಿದ್ದಾರೆ. ಡಿಕ್ರಿಯ ತರುವಾಯ, ಡಿಕ್ರಿದಾರ ಶಿವಮೂರ್ತಿ ಮೃತನಾಗಿದ್ದಾನೆ. ಆದ್ದರಿಂದ ಆತನ ಪತ್ನಿ ಮತ್ತು ಮಗಳು ಜಾರಿ ಅರ್ಜಿಯನ್ನು ದಾಖಲು ಮಾಡಲು ಆಯ್ಕೆ ಮಾಡಿಕೊಂಡಿದ್ದಾರೆ.

6. 2ನೇ ಪ್ರತ್ಯರ್ಜಿದಾರ ಕೃಷ್ಣಮೂರ್ತಿಯು, ಶಿವಮೂರ್ತಿಯು ಸಹೋದರನಾಗಿದ್ದಾನೆ. ಆತನ ಪ್ರಕಾರ, ಮೊದಲನೇ ಡಿಕ್ರಿದಾರರಾದ ಶ್ರೀಮತಿ ಶಶಿಕಲಾ, ಶಿವಮೂರ್ತಿಯ ಪತ್ನಿಯಾಗಿದ್ದು, ಆಕೆ ಪತಿಯನ್ನು ತ್ಯಜಿಸಿದ್ದಾಳೆ ಮತ್ತು ತರುವಾಯ ಆತನನ್ನು ನೋಡಿಕೊಂಡಿರುವುದಿಲ್ಲ. ಆದ್ದರಿಂದ ಶಿವಮೂರ್ತಿಯು, ಹೇಳಲಾದ ಈ ಎಲ್ಲಾ ಸ್ವತ್ತುಗಳನ್ನು ದಿನಾಂಕ 8.4.2010ರ ಮೂಲಕ ಜಾರಿ ಅರ್ಜಿ ಷೆಡ್ಯೂಲ್ ಸ್ವತ್ತನ್ನು ಸೇರ್ಪಡೆಗೊಳಿಸಿ ಮರಣ ಶಾಸನದ ಮೂಲಕ ತನಗೆ ಕೊಟ್ಟಿದ್ದಾರೆಂದು ನಿವೇದಿಸಿದ್ದಾರೆ. ಹೀಗಾಗಿ ಆತನು ಜಾರಿ ಅರ್ಜಿ ಷೆಡ್ಯೂಲ್ ಸ್ವತ್ತನ್ನು ಸೇರ್ಪಡೆಗೊಳಿಸಿ ಈ ಎಲ್ಲಾ ಸ್ವತ್ತುಗಳ ಮಾಲೀಕನಾಗಿರುವುದಾಗಿ ಹೇಳಲಾಗಿದೆ. ಆದ್ದರಿಂದ, ನೋಂದಾಯಿತವಲ್ಲದ ಉಯಿಲು ದಿನಾಂಕ 8.4.2010ರ ಆಧಾರದ ಮೇಲೆ ಹೆಚ್ಚುವರಿ ಡಿಕ್ರಿದಾರನಾಗಿ ಸ್ವತಃ ಪಕ್ಷಕಾರರನ್ನಾಗಿ ಮಾಡಲು ಅರ್ಜಿ ಅಂದರೆ ಐ.ಎ. 1ನ್ನು ಆತನು ದಾಖಲು ಮಾಡಿದ್ದಾನೆ. ಆದ್ದರಿಂದ, ಡಿಕ್ರಿದಾರನಾಗಿ ತನ್ನನ್ನು ಸೇರ್ಪಡೆಗೊಳಿಸಲು ಮತ್ತು ಈ ಪ್ರಕರಣವನ್ನು ವಾದಿಸಲು ಸಿಪಿಸಿಯ 146ನೇ ಪ್ರಕರಣದ ಅಡಿಯಲ್ಲಿ ಮತ್ತು ಆದೇಶ 21 ಕ್ರಮಾದೇಶ 16ರ ಅಡಿಯಲ್ಲಿ ಅರ್ಜಿಯನ್ನು ದಾಖಲು ಮಾಡಲು ಆತನು ಆಯ್ಕೆ ಮಾಡಿಕೊಂಡಿದ್ದಾನೆ. ಅರ್ಜಿ ಐ.ಎ.4ನ್ನು ಕೃಷ್ಣಮೂರ್ತಿಯಿಂದ ದಿನಾಂಕ 16.7.2014ರಂದು ದಾಖಲು ಮಾಡಲಾಗಿದೆ.

7. ಉಯಿಲಿನ ದಿನಾಂಕ 8.4.2010, ಪ್ರತ್ಯರ್ಜಿದಾರರು ಮೇಲೆ ಬಂಧನ ಕಾರಿಯಾಗಿರುವ ಅಂದರೆ, ಡಿಕ್ರಿದಾರರಾಗಿದ್ದಾರೆ ಮತ್ತು ಜಾರಿ ಅರ್ಜಿ ಷೆಡ್ಯೂಲ್ ಸ್ವತ್ತನ್ನು ಸೇರಿದಂತೆ ಸ್ಥಿರ ಸ್ವತ್ತಿನ 10 ಸ್ವತ್ತುಗಳ ಸಂಬಂಧದಲ್ಲಿ ಖಾಯಂ ನಿರ್ಬಂಧಕಾಜ್ಞೆಯ ಪರಿಹಾರಕ್ಕಾಗಿ ಆ ದಾವೆಯ ಸ್ವತ್ತು ಸಂಖ್ಯೆ 6ರಲ್ಲಿ ಕಂಡುಬಂದಿದೆಯೆಂದು ಘೋಷಿಸಲು 29.6.2010ರಂದು ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು ಇವರ ಮುಂದೆ ಮೂಲ ದಾವೆ ಸಂಖ್ಯೆ 25950/2010ರಲ್ಲಿ, ಸದರಿ ಕೃಷ್ಣಮೂರ್ತಿಯು ದಾವೆಯನ್ನು ದಾಖಲು ಮಾಡಿದ್ದಾನೆ.

8. ಕೃಷ್ಣಮೂರ್ತಿಯಿಂದ ದಾಖಲು ಮಾಡಿದ ಎಲ್ಲಾ ಅರ್ಜಿಗಳನ್ನು ವಿವರವಾದ ಲಿಖಿತ ಆಕ್ಷೇಪಣೆಗಳನ್ನು ದಾಖಲಿಸುವುದರ ಮೂಲಕ ಆಕ್ಷೇಪಿಸಲಾಗಿದೆ. ಕೃಷ್ಣಮೂರ್ತಿಯವರಿಂದ ಸಲ್ಲಿಸಲಾದ ಎಲ್ಲಾ ಅರ್ಜಿಗಳು ತಪ್ಪು ತಿಳಿವಳಿಕೆಯಿಂದ ಕೂಡಿವೆ ಮತ್ತು ಮೂಲ ದಾವೆ ಸಂಖ್ಯೆ 25950/2010ರಲ್ಲಿ ದಾಖಲು ಮಾಡಿದ ದಾವೆಯ ದೃಷ್ಟಿಯಿಂದ ಕಾನೂನು ಅಥವಾ ಆ ಸಂಗತಿಗಳಲ್ಲಾಗಲಿ ಊರ್ಜಿತ ಯೋಗ್ಯವಾಗಿರುವುದಿಲ್ಲವೆಂದು ಹೇಳಿದ್ದಾರೆ.

9. ಅಂತಿಮವಾಗಿ ಮಾನ್ಯ ನ್ಯಾಯಾಧೀಶರು, ಪ್ರಶ್ನಿತ ಆದೇಶದಲ್ಲಿ ಕಂಡು ಬರುವಂತೆ ಪರಿಗಣನೆಗಾಗಿ ಈ ಮುಂದಿನ 3 ಅಂಶಗಳನ್ನು ರೂಪಿಸಿದ್ದಾರೆ:

*i) ಆಕ್ಷೇಪಣಾಕಾರನನ್ನು, ಹೆಚ್ಚುವರಿ ಡಿಎಚ್‌ಆರ್ ಆಗಿ ಸೇರಿಸಬಹುದಾಗಿದೆಯೇ?*

*ii) ಆಕ್ಷೇಪಣಾಕಾರನನ್ನು, ಐ.ಎ.ಸಂಖ್ಯೆ 2ರಲ್ಲಿ ಕೋರಿರುವ ಸಾಕ್ಷಿದಾರರನ್ನು ವಿಚಾರಣೆ ಮಾಡಲು ಅನುಮತಿಸಬಹುದಾಗಿದೆಯೇ?*

*iii) ಆದೇಶ ಏನು?*

10. ಅಪೀಲುದಾರ ಕೃಷ್ಣಮೂರ್ತಿಯು, ಉಯಿಲು ದಿನಾಂಕ 8.4.2010ರ ಮೇಲೆ ಅವಲಂಬಿಸಿದ್ದಾನೆ. ಆದ್ದರಿಂದ, ಹೆಚ್ಚುವರಿ ಡಿಕ್ರಿದಾರನಾಗಿ ದಾಖಲೆ ಮೇಲೆ ಬರುವುದಕ್ಕೆ ತನ್ನನ್ನು ಅನುಮತಿಸುವಂತೆ ಈ ನ್ಯಾಯಾಲಯವನ್ನು ಆತನು ಕೋರಿದ್ದಾನೆಂದು ಅಧಿವಿಚಾರಣಾ ನ್ಯಾಯಾಲಯ ಅಭಿಪ್ರಾಯ ಪಟ್ಟಿದೆ. ಸದರಿ ಉಯಿಲಿನ ಕಾರಣದಿಂದ ತನ್ನ ಹೆಸರಿನಲ್ಲಿ ಸೃಷ್ಟಿಸಲಾದ ಹಿತಾಸಕ್ತಿಯ ಹಿನ್ನೆಲೆಯಲ್ಲಿ, ಆತನು, ಅಗತ್ಯಪಕ್ಷಕಾರನಾಗಿದ್ದಾನೆ ಮತ್ತು ಕ್ರಯಪತ್ರವನ್ನು ಡಿಕ್ರಿದಾರರ ಹೆಸರಿನಲ್ಲಿ ಬರೆದುಕೊಡಲಾದಲ್ಲಿ ಆತನ ಹಿತಾಸಕ್ತಿಗೆ, ಪ್ರತಿಕೂಲವಾಗಿದೆಯೆಂದು ಮುಂದುವರೆದು ಅಭಿಪ್ರಾಯಪಟ್ಟಿದೆ. ಉಯಿಲಿನ ಮೇಲೆ ಅವಲಂಬಿಸಿರುವುದನ್ನು ರುಜುವಾತುಪಡಿಸುವುದಕ್ಕೆ ಅವನಿಗೆ ವ್ಯವಸ್ಥಿತವಾಗಿ ಸಮರ್ಥನೆ ಮಾಡಿಕೊಳ್ಳಲು, ಉಯಿಲನ್ನು ರುಜುವಾತುಪಡಿಸುವುದಕ್ಕೆ ಅವನಿಗೆ ಅವಕಾಶ ನೀಡಬಹುದಾಗಿದೆಯೆಂದು ಮುಂದುವರೆದು ಅಭಿಪ್ರಾಯಪಟ್ಟಿದೆ. ಸಿಪಿಸಿಯ ಪ್ರಕರಣ 2(11)ರ ಅಡಿಯಲ್ಲಿ "ಕಾನೂನು ಪ್ರತಿನಿಧಿ" ಯೆಂಬ ಪದಗಳ ಪರಿಭಾಷೆಯನ್ನು, ಉಯಿಲಿನ ಅಡಿಯಲ್ಲಿ ಮರಣಶಾಸನ ಮೂಲಕ ಸ್ವತ್ತನ್ನು ಪಡೆದವನೆಂದು ಅಭಿಪ್ರಾಯಪಟ್ಟು ಪ್ರಶ್ನಿತ ಆದೇಶದ ಪ್ಯಾರಾ 9ರಲ್ಲಿ ಉಲ್ಲೇಖಿಸಲಾಗಿದೆ. ಹಾಗಾಗಿ ಮರಣ ಶಾಸನದ ಮೂಲಕ ಸ್ವತ್ತನ್ನು ಪಡೆದವನನ್ನು ಕಾನೂನು ಪ್ರತಿನಿಧಿ ಎಂದು ಭಾವಿಸಲಾಗಿದೆ ಮತ್ತು ಅದು, ಅಪೀಲುದಾರ ಕೃಷ್ಣಮೂರ್ತಿಯಿಂದ ಪ್ರಮುಖವಾದ ಸಾಕ್ಷ್ಯವನ್ನು ಮರೆ ಮಾಡುವಂತೆ ಮಾಡುವುದು ಸೂಕ್ತವಾಗದು. ಕೇವಲ ಆಕ್ಷೇಪಣಾಕಾರನಾಗಿರುವುದರಿಂದ, ಜಾರಿ ಅರ್ಜಿಯನ್ನು ದಾಖಲು ಮಾಡುವುದಕ್ಕೆ ಮುಂಚೆ ಆ ದಾವೆಯನ್ನು ಈಗಾಗಲೇ ದಾಖಲು ಮಾಡಿದ್ದು, ಆತನು, ಜಾರಿ ಅರ್ಜಿಯಿಂದ ಅನುಸರಿಸಲಾಗದು ಎಂದು ಮಾನ್ಯ ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ. ***ಜುಗಲ್‌ಕಿಶೋರ್ ಸರಾಫ್ –ವಿರುದ್ಧ– ಮೆ|| ರಾ. ಕಾಟನ್ ಕಂ. ಲಿಮಿಟೆಡ್*** [1], ರ ಪ್ರಕರಣದಲ್ಲಿ ವರದಿ ಮಾಡಿದ ತೀರ್ಮಾನದ ಮೇಲೆ ಅವಲಂಬಿಸಿರುವುದನ್ನು ಮಂಡಿಸಲಾಗಿದ್ದು, ಸಿಪಿಸಿಯ 21ನೇ ಕ್ರಮಾದೇಶದ 16ನೇ ನಿಯಮದಲ್ಲಿ, ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಉಯಿಲನ್ನು ವ್ಯವಸ್ಥಿತವಾಗಿ

1. ಎಐಆರ್ 1955 ಎಸ್‌ಸಿ 376

ರುಜುವಾತುಪಡಿಸುವುದಕ್ಕೆ ಪ್ರತಿಪಾದಕನು, ಸ್ವತಃ ವಿಚಾರಣೆಗೊಳಪಡುವುದಕ್ಕೆ ಅವಕಾಶ ನೀಡಬಹುದು ಮತ್ತು ಉಯಿಲನ್ನು ದೃಢೀಕರಿಸಿದ ಇತರ ವ್ಯಕ್ತಿಗಳನ್ನು ವಿಚಾರಣೆ ಮಾಡುವುದಕ್ಕೆ ಅವಕಾಶ ನೀಡಬಹುದಾಗಿದೆ. ಮತ್ತು ವಿಷಯದ ಈ ದೃಷ್ಟಿಯಿಂದ ಐ.ಎ.1, 2 ಮತ್ತು 4ನ್ನು ಅಂಗೀಕರಿಸಲಾಗಿದೆ ಮತ್ತು ಐ.ಎ.3ನ್ನು ವಜಾಗೊಳಿಸಲಾಗಿದೆಯೆಂಬ ನಿರ್ಣಯಕ್ಕೆ ಮಾನ್ಯ ನ್ಯಾಯಾಧೀಶರು ಬಂದಿದ್ದಾರೆ.

11. ಜಾರಿ ನ್ಯಾಯಾಲಯದ ಮುಂದೆ ಅಪೀಲುದಾರ ಕೃಷ್ಣಮೂರ್ತಿಯಿಂದ ಅರ್ಜಿಗಳನ್ನು ದಾಖಲು ಮಾಡಿದ್ದು, ಶಿವಮೂರ್ತಿಯ ಪತ್ನಿ ಮತ್ತು ಮಗಳ ವಿರುದ್ಧ ನಿಯತ ದಾವೆಯನ್ನು ಈಗಾಗಲೇ ಆತನು ದಾಖಲು ಮಾಡಿರುವಾಗ ಅವು, ನಿರ್ದಿಷ್ಟವಾದ ಕಾನೂನಿನಲ್ಲಾಗಲಿ ಅಥವಾ ಆ ಸಂಗತಿಗಳಲ್ಲಾಗಲಿ ಊರ್ಜಿತ ಯೋಗ್ಯವಾಗಿರುವುದಿಲ್ಲವೆಂದು ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಯು ವಾದಿಸಿದ್ದಾರೆ. ಆದುದರಿಂದ, ಆತನನ್ನು ಜಾರಿ ಅರ್ಜಿಯಲ್ಲಿ ಪಕ್ಷಕಾರನಾಗಿ ತಂದಿರುವ ಪ್ರಶ್ನೆ ಮತ್ತು ಉಯಿಲನ್ನು ರುಜುವಾತುಪಡಿಸಲು ನೀಡುವ ಅವಕಾಶ, ಉದ್ಭವಿಸಲಾಗದೆಂದು ವಾದಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ನ್ಯಾಯವಾದಿಯು, ***ಪಿ. ಜನಾರ್ಧನ ರಾವ್ –ವಿರುದ್ಧ– ಕಣ್ಣನ್ ಮತ್ತು ಇತರರು*** [2], ಪ್ರಕರಣದಲ್ಲಿನ ತೀರ್ಮಾನವನ್ನು ಅವಲಂಬಿಸಿದ್ದಾರೆ.

12. ಸಿಪಿಸಿಯ 21ನೇ ಕ್ರಮಾದೇಶದ 97ನೇ ನಿಯಮವು ಯಾರೇ ತೆರವು ಮಾಡದಿರುವ ಡಿಕ್ರಿಯಿಂದ ಬದ್ಧನಾದ ವ್ಯಕ್ತಿಯನ್ನು ತೆಗೆದುಹಾಕುವುದಕ್ಕಾಗಿ ಉಪಬಂಧಿಸಲಾಗಿದೆಂಯೆಂದು ***ಪಿ. ಜನಾರ್ಧನರಾವ್*** ಪ್ರಕರಣದಲ್ಲಿ ಅಭಿಪ್ರಾಯಪಡಲಾಗಿದೆ. ಸ್ವಾಧೀನದ ಅದರಲ್ಲಿನ ಪ್ರತಿಶೋಧದ ಪರಿಸ್ಥಿತಿಯನ್ನು ಪರಿಗಣನೆಗೆ ತೆಗೆದುಕೊಂಡು ಡಿಕ್ರಿಯಿಂದ ಬದ್ಧನಾದ, ತೀರ್ಪು–ಋಣಿ ಅಥವಾ ಇತರೇ ಯಾರೇ ವ್ಯಕ್ತಿಯಿಂದ ನೀಡಲಾಗಿದ್ದು, ತನ್ನ ಸ್ವಂತ ಹಕ್ಕಿನಲ್ಲಿ ಸ್ವಾಧೀನದಲ್ಲಿರಬಹುದಾದ ವ್ಯಕ್ತಿಯ ಕ್ಲೇಮಿನ ಉಯಿಲಿನಲ್ಲಿ ಸೇರಿಸಲಾಗಿದೆ ಮತ್ತು

2. (2004) 11 ಎಸ್‌ಸಿಸಿ 511

ತೀರ್ಪು–ಋಣಿ ಸ್ವತಂತ್ರವಾಗಿ, ಆದರೆ ಕ್ಲೇಮಿನ ಮೇಲ್ನೋಟದ ವ್ಯಕ್ತಿಯನ್ನು ಸಮರ್ಥಿಸಲಾಗದು. ಅದರಲ್ಲಿ, ಆದಾಗ್ಯೂ ಪ್ರತಿರೋಧ ನೀಡಲಾಗಿದೆ ಅಥವಾ ತನ್ನ ಸ್ವಂತ ಹಕ್ಕಿನಲ್ಲಿ ಸ್ವಾಧೀನದಲ್ಲಿರಬಹುದಾದ ಕ್ಲೇಮುದಾರನ ಕ್ಲೇಮಿನಿಂದ ಮುಂದುವರೆಯಲು ಅದರಲ್ಲಿ ಅಡ್ಡಿಯನ್ನು ಉಂಟು ಮಾಡಲಾಗಿದೆ ಮತ್ತು ಯಾರ ಕ್ಲೇಮನ್ನು, ಸದ್ಭಾವನೆಯಿಂದ ಇಚ್ಛಿಸಿದ ಕಾರಣದ ಮೇಲೆ, ತನಿಖೆಯಿಲ್ಲದೆ ತಿರಸ್ಕರಿಸಲಾಗದು ಡಿಕ್ರಿದಾರನನ್ನು, 21ನೇ ಕ್ರಮಾದೇಶ 97ನೇ ನಿಯಮದ ಮೇರೆಗೆ ಮುಂದುವರೆಸತಕ್ಕದ್ದು.

13. ಇದಕ್ಕೆ ವಿರುದ್ಧವಾಗಿ, 2ನೇ ಪ್ರತ್ಯರ್ಜಿದಾರ / ಅಪೀಲುದಾರನ ಪರವಾಗಿ, ಹಾಜರಾದ ಮಾನ್ಯ ನ್ಯಾಯವಾದಿಯು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಈ ಮುಂದಿನ ತೀರ್ಮಾನಗಳ ಮೇಲೆ ಅವಲಂಬಿತರಾಗಿದ್ದಾರೆ.

1) ***ಎಐಆರ್ 1998 ಎಸ್‌ಸಿಸಿ 1827(1)***
***ಶ್ರೀನಾಥ್ ಮತ್ತು ಇನ್ನೊಬ್ಬರು –ವಿರುದ್ಧ– ರಾಜೇಶ್ ಮತ್ತು ಇತರರು***
*ಸುಸಂಬದ್ಧ ಪ್ಯಾರಾ ಸಂಖ್ಯೆ 10, 13, 14, 15, 16, 17, 18.*

2) ***(1995) 1 ಎಸ್‌ಸಿಸಿ 242***
***ನೂರ್‌ದುದ್ದೀನ್ –ವಿರುದ್ಧ– ಡಾ|| ಕೆ.ಎಲ್. ಆನಂದ್***
*ಸುಸಂಬದ್ಧ ಪ್ಯಾರಾ ಸಂಖ್ಯೆ 6, 7, 8.*

3) ***(2015) 1 ಎಸ್‌ಸಿಸಿ 379***
***ಸಮೀರ್‌ಸಿಂಗ್ –ವಿರುದ್ಧ– ಅಬ್ದುಲ್ ರಾಬ್***
*ಸುಸಂಬದ್ಧ ಪ್ಯಾರಾ ಸಂಖ್ಯೆ 13, 15, 16, 17, 18, 20, 21.*

14. ಪಕ್ಷಕಾರರ ಪರವಾಗಿ ಮಾನ್ಯ ನ್ಯಾಯವಾದಿಗಳ ಸುನಾವಣೆ ಆಲಿಸಿದ ತರುವಾಯ ಮತ್ತು ದಾಖಲೆಗಳನ್ನು ಪರಿಶೀಲಿಸಿದ ತರುವಾಯ, ಈ ನ್ಯಾಯಾಲಯದ ಪರಿಗಣನೆಗಾಗಿ ಈ ಮುಂದಿನ ಅಂಶಗಳು ಉದ್ಭವಿಸುತ್ತವೆ:

*ಎ) ಜಾರಿ ನ್ಯಾಯಾಲಯ, ಶ್ರೀ ಶಿವಮೂರ್ತಿಯಿಂದ ಬರೆದುಕೊಡಲಾಗಿದೆಯೆಂದು ಹೇಳಲಾದ ಉಯಿಲಿನ ಮೇಲೆ ಪ್ರಕರಣವನ್ನು ವಾದಿಸುವುದಕ್ಕೆ ಮತ್ತು ದಾಖಲೆ ಮೇಲೆ ಬರುವುದಕ್ಕೆ ಶ್ರೀ ಕೃಷ್ಣಮೂರ್ತಿಗೆ ಅನುಮತಿಸಿರುವುದು ಸಮರ್ಥನೀಯವಾಗಿದೆಯೇ?*

*ಬಿ) ಈ ನ್ಯಾಯಾಲಯದಿಂದ ಯಾವುದೇ ಹಸ್ತಕ್ಷೇಪವನ್ನು ಬಯಸಲಾಗಿದೆಯೆ, ಹಾಗಾದಲ್ಲಿ, ಅದರ ವ್ಯಾಪ್ತಿ ಏನು?*

15. ದಿನಾಂಕಗಳೊಂದಿಗೆ ಈ ಮುಂದಿನ ಆಧಾರಾಂಶಗಳನ್ನು ಉಲ್ಲೇಖಿಸಲಾಗಿರುವ ಕೆಲವು ಅಂಶಗಳು:

| ಕ್ರ.ಸಂ. | ದಿನಾಂಕ | ಅಂಶಗಳು |
|---|---|---|
| 1. | 09.04.2008 | ಅವನಿಂದ ಬರೆದು ಕೊಡಲಾದ ಮಾರಾಟ ಒಪ್ಪಂದದ ಪ್ರಕಾರ ದಾವೆಯ ಷೆಡ್ಯೂಲ್ ಸ್ವತ್ತಿನ ಸಂಬಂಧದಲ್ಲಿ ನೋಂದಾಯಿತ ನಿರುಪಾಧಿಕ ಕ್ರಯ ಪತ್ರವನ್ನು ಬರೆದುಕೊಟ್ಟ 1ನೇ ಪ್ರತ್ಯರ್ಜಿದಾರನ ವಿರುದ್ಧ ಪ್ರಧಾನ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ), ಬೆಂಗಳೂರು ಗ್ರಾಮೀಣ ಜಿಲ್ಲೆ ಇವರ ಮುಂದೆ ನಿರ್ದಿಷ್ಟ ಪಾಲನೆಗಾಗಿ ಮೂಲ ದಾವೆ ಸಂಖ್ಯೆ 674/2008ರಲ್ಲಿ ಶ್ರೀ ಎನ್.ಎಚ್. ಶಿವಮೂರ್ತಿ ದಾವೆಯನ್ನು ದಾಖಲು ಮಾಡಿದ್ದಾನೆ. |

| | | |
|---|---|---|
| 2. | 11.01.2010 | ಮೂಲ ದಾವೆ ಸಂಖ್ಯೆ 674/2008ರಲ್ಲಿ ಪಕ್ಷಕಾರರರು ನೀಡಿದ ಒಪ್ಪಂದ ರಾಜಿಯ ನಿಬಂಧನೆಗಳಲ್ಲಿರುವಂತೆ ರಾಜಿ ಡಿಕ್ರಿಯಿಂದ ವಿಲೆ ಮಾಡಲಾಗಿದೆ. |
| 3. | 20.04.2010 | ಶ್ರೀ ಎನ್.ಎಚ್. ಶಿವಮೂರ್ತಿ ಮೃತನಾಗಿದ್ದು, ತನ್ನ ಕಾನೂನು ವಾರಸುದಾರರಾದ ಇದರಲ್ಲಿನ ಅರ್ಜಿದಾರರನ್ನು ಅಗಲಿದ್ದಾರೆ. |
| 4. | 23.06.2010 | ತೀರ್ಪು – ಋಣಿಯ ಮೂಲ ದಾವೆ ಸಂಖ್ಯೆ 674/2008ರಲ್ಲಿ ರಾಜಿ ಡಿಕ್ರಿಯಲ್ಲಿ ಹಾಗೆ ಮಾಡಿದ ಆದೇಶದ ಕ್ರಯಪತ್ರವನ್ನು ಬರೆದುಕೊಡುವುದಕ್ಕಾಗಿ ಕೋರಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು ಇವರ ಮುಂದೆ ಇಎಕ್ಸ್ ಸಂಖ್ಯೆ 65/2010ರಲ್ಲಿ ಜಾರಿ ಅರ್ಜಿಯನ್ನು ಇದರಲ್ಲಿನ ಅರ್ಜಿದಾರರು ದಾಖಲು ಮಾಡಿದ್ದಾರೆ. |
| 5. | 29.06.2010 | ನಗರ ಸಿವಿಲ್ ನ್ಯಾಯಾಧೀಶರು ಬೆಂಗಳೂರು ಇವರ ಮುಂದೆ ನೋಂದಾಯಿತವಲ್ಲದ ಉಯಿಲು ದಿನಾಂಕ 08.04.2010 ಆಧಾರದ ಮೇಲೆ ಮೂಲ ದಾವೆ ಸಂಖ್ಯೆ 25950/2010ರಲ್ಲಿ ಹೇಳಲಾದ ಘೋಷಣೆಗಾಗಿ 2ನೇ ಪ್ರತ್ಯರ್ಜಿದಾರನು ದಾವೆಯನ್ನು ದಾಖಲು ಮಾಡಿದ್ದಾನೆ. |
| 6. | 30.06.2010 | 2ನೇ ಪ್ರತ್ಯರ್ಜಿದಾರನು, ಮೂಲ ದಾವೆ ಸಂಖ್ಯೆ 25950/2010ರಲ್ಲಿ ನಿರ್ಬಂಧಕಾಜ್ಞೆಯ ಏಕಪಕ್ಷೀಯ ಮಧ್ಯಕಾಲೀನ ಆದೇಶವನ್ನು ಪಡೆದುಕೊಂಡಿದ್ದಾನೆ. |

| | | |
|---|---|---|
| 7. | 07.08.2010 | 2ನೇ ಪ್ರತ್ಯರ್ಜಿದಾರನು, ಆಕ್ಷೇಪಣಾಕಾರ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣವನ್ನು ಓದಿಕೊಂಡು 21ನೇ ಕ್ರಮಾದೇಶದ 97ನೇ ನಿಯಮವನ್ನು ಓದಿಕೊಂಡು 1ನೇ ಕ್ರಮಾದೇಶದ 10ನೇ ನಿಯಮದ ಮೇರೆಗೆ ಇ.ಎಕ್ಸ್. ಸಂಖ್ಯೆ 65/2010ರಲ್ಲಿ. ಐಎ.1ರಲ್ಲಿ ಸಲ್ಲಿಸಿರುತ್ತಾನೆ. |
| 8. | 26.11.2010 | ಅರ್ಜಿದಾರರು ಐ.ಎ.1ರ ವಿರುದ್ಧ ಆಕ್ಷೇಪಣೆಗಳನ್ನು, ದಾಖಲು ಮಾಡಿದ್ದಾರೆ. |
| 9. | 08.07.2011 | ಮಾನ್ಯ ಸಿವಿಲ್ ನ್ಯಾಯಾಲಯವು ವಿಷಯವನ್ನು ಸುನಾವಣೆ ಮಾಡದೆ ಈ ಪ್ರಕರಣವನ್ನು ಅನೇಕ ಬಾರಿ ಮುಂದಕ್ಕೆ ಹಾಕಲಾಗಿದ್ದು, ಐ.ಎ. ವಿಚಾರಣೆಗಾಗಿ ಮುಂದೂಡಿದೆ. |
| 10. | 28.07.2011 | 2ನೇ ಪ್ರತ್ಯರ್ಜಿದಾರನು, ಸಾಕ್ಷ್ಯ ಶಪಥ ಪತ್ರವನ್ನು ದಾಖಲು ಮಾಡಿದ್ದಾನೆ ಮತ್ತು ಒ.ಡಬ್ಲ್ಯೂ. 1 ಆಗಿ ಸ್ವತಃ ವಿಚಾರಣೆಗೊಳಗಾಗಿದ್ದಾನೆ. |
| 11. | 24.08.2011 | ಮೂಲ ನೋಂದಾಯಿತವಲ್ಲದ ಉಯಿಲನ್ನು 2ನೇ ಪ್ರತ್ಯರ್ಜಿದಾರನು ಹಾಜರುಪಡಿಸಿದ್ದು, ನಿಶಾನೆ 01 ರಂತೆ ಗುರುತಿಸಲಾಗಿದೆ ಮತ್ತು ವಾದ ಪತ್ರದ ಪ್ರತಿ ಮೂಲ ದಾವೆ ಸಂಖ್ಯೆ 25950/2010ರಲ್ಲಿನ ಆದೇಶದ ಪ್ರತಿ ಮತ್ತು ಕೆಲವೊಂದು ಪಿತ್ರಾರ್ಜಿತ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಂಶವೃಕ್ಷ ಮತ್ತು ಮೂರು ಆರ್‌ಟಿಸಿಗಳನ್ನು ನಿಶಾನೆ 02 ರಿಂದ 8 ರಂತೆ ಸಹ ಗುರುತು ಮಾಡಲಾಗಿದೆ. |

| | | |
|---|---|---|
| 12. | 02.06.2012 | 2ನೇ ಪ್ರತ್ಯರ್ಜಿದಾರನು, ಸಾಕ್ಷಿಗಳ ಪಟ್ಟಿಯನ್ನು ಹಾಜರುಪಡಿಸುವುದಕ್ಕಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ ಆದೇಶ 16 ಕ್ರಮಾದೇಶ 1(ಎ) ಅಡಿಯಲ್ಲಿ ಅರ್ಜಿ ಐ.ಎ.–2ನ್ನು ದಾಖಲು ಮಾಡಿದ್ದಾನೆ. |
| 13. | 12.06.2012 | ಅರ್ಜಿದಾರರು, ಎನ್‌ಓಸಿ ವಕಾಲತ್ತಿನೊಂದಿಗೆ ಐ.ಎ.–2ಕ್ಕೆ ತಮ್ಮ ಆಕ್ಷೇಪಣೆಗಳನ್ನು ಮತ್ತು 2ನೇ ಪ್ರತ್ಯರ್ಜಿದಾರನಿಂದ ದಾಖಲು ಮಾಡಿದ ಆಕ್ಷೇಪಣಾಕಾರ ಅರ್ಜಿಯನ್ನು ತಿರಸ್ಕರಿಸಲು ಕೋರಿ ಸಿಪಿಸಿಯ 151ನೇ ಪ್ರಕರಣದ ಮೇರೆಗೆ ಐ.ಎ.3ರಲ್ಲಿ ಅರ್ಜಿಯನ್ನು ದಾಖಲು ಮಾಡಿದ್ದಾರೆ. |
| 14. | 04.04.2014 | 2ನೇ ಪ್ರತ್ಯರ್ಜಿದಾರನು, ಆತನಿಂದ ದಾಖಲು ಮಾಡಿದ ಐ.ಎ.–2 ಸಂಬಂಧದಲ್ಲಿ ಲಿಖಿತ ವಾದಗಳನ್ನು ದಾಖಲು ಮಾಡಿದ್ದಾನೆ. |
| 15. | 16.07.2014 | 2ನೇ ಪ್ರತ್ಯರ್ಜಿದಾರನು, ಜಾರಿ ಅರ್ಜಿಯಲ್ಲಿ ಹೆಚ್ಚುವರಿ ಡಿಕ್ರಿದಾರನಾಗಿ ತನ್ನನ್ನು ಸೇರಿಸುವುದಕ್ಕಾಗಿ ಸಿಪಿಸಿಯ 21ನೇ ಕ್ರಮಾದೇಶ 16ನೇ ನಿಯಮವನ್ನು ಓದಿಕೊಂಡು 146ನೇ ಪ್ರಕರಣದ ಅಡಿಯಲ್ಲಿ ಐ.ಎ.–4ರಲ್ಲಿ ಇತರೇ ಅರ್ಜಿಯನ್ನು ದಾಖಲು ಮಾಡಿದ್ದಾನೆ. |
| 16. | 25.08.2014 | ಅರ್ಜಿದಾರರು, ಐ.ಎ.4ಕ್ಕೆ ಆಕ್ಷೇಪಣೆಗಳನ್ನು ದಾಖಲು ಮಾಡಿದ್ದಾರೆ. |
| 17. | 03.11.2014 | ಜಾರಿ ಅರ್ಜಿಯಲ್ಲಿನ ಅರ್ಜಿಗಳ ಸಮಯದಲ್ಲಿ ದೀರ್ಘಕಾಲಾವಧಿಯ ಇತ್ಯರ್ಥ ವಿಳಂಬದಿಂದ ಬಾಧಿತರಾಗಿ ಈ ಅರ್ಜಿಗಳ ವಿಲೇಗಾಗಿ ನಿರ್ದೇಶನ |

| | | |
|---|---|---|
| | | ಕೋರಿ ಈ ನ್ಯಾಯಾಲಯದ ಮುಂದೆ ರಿಟ್ ಅಪೀಲು ಸಂಖ್ಯೆ 50794–50795/2014 (ಜಿಎಂ, ಸಿಪಿಸಿ) ರಲ್ಲಿ ಅರ್ಜಿದಾರರು ರಿಟ್ ಅರ್ಜಿಯನ್ನು ದಾಖಲು ಮಾಡಿದ್ದಾರೆ. |
| 18. | 07.11.2014 | 2 ತಿಂಗಳೊಳಗೆ ಅರ್ಜಿಗಳ ವಿಲೇಗಾಗಿ ಅಧಿವಿಚಾರಣಾ ನ್ಯಾಯಾಲಯಕ್ಕೆ ನಿರ್ದೇಶಿಸಿದ್ದು, ರಿಟ್ ಅಪೀಲು ಸಂಖ್ಯೆ 50794–50795/2014 (ಜಿಎಂ.ಸಿಪಿಸಿ)ರಲ್ಲಿ ರಿಟ್ ಅರ್ಜಿಯನ್ನು ಮಾನ್ಯ ಈ ನ್ಯಾಯಾಲಯ ಅಂಗೀಕರಿಸಿದೆ. |
| 19. | 09.01.2014 | ಐ.ಎ. 1 ರಿಂದ ಐ.ಎ.4ರಲ್ಲಿ ಅರ್ಜಿಗಳ ವಿಲೆಯ ಸಾಮಾನ್ಯ ಆದೇಶವನ್ನು, ಇಎಕ್ಸ್ ಸಂಖ್ಯೆ 65/2010ರಲ್ಲಿ ಮಾಡಲಾಗಿದೆ. |

16. ಶ್ರೀ ಶಿವಮೂರ್ತಿಯು, ಡಿಕ್ರಿದಾರರಾದ ತನ್ನ ಪತ್ನಿ ಮತ್ತು ಮಗಳನ್ನು ಅಗಲಿದ್ದು, ದಿನಾಂಕ 20.4.2010ರಂದು ಮೃತನಾಗಿದ್ದು, ಕೃಷ್ಣಮೂರ್ತಿಯ ಸಹೋದರನಾಗಿದ್ದಾನೆ. ಜಾರಿ ಅರ್ಜಿಯನ್ನು ದಿನಾಂಕ 23.06.2010ರಂದು ಲೇಟ್ ಶಿವಮೂರ್ತಿಯ ಪತ್ನಿ ಮತ್ತು ಮಗಳಿಂದ ದಾಖಲು ಮಾಡಲಾಗಿದೆ. ಆರು ದಿನಗಳ ನಂತರ ಅಂದರೆ, 29.6.2010ರಂದು ಶಿವಮೂರ್ತಿ ಕೊಟ್ಟಿರುವ ಎಲ್ಲಾ ಸ್ವತ್ತುಗಳನ್ನು ತನ್ನ ಹೆಸರಿನಲ್ಲಿ ಬರೆದುಕೊಡಲು ಹೇಳಲಾದ ನೋಂದಾಯಿತವಲ್ಲದ ದಿನಾಂಕ 08.04.2010ರ ಉಯಿಲಿನ ಆಧಾರದ ಮೇಲೆ ತನ್ನ ಸ್ವಾಮ್ಯದ ಘೋಷಣೆಗಾಗಿ ಮೂಲ ದಾವೆ ಸಂಖ್ಯೆ.29590/2010ನ್ನು ಹೊಂದಿದ ಕೃಷ್ಣಮೂರ್ತಿಯು ದಾವೆಯನ್ನು ದಾಖಲು ಮಾಡಿದ ಸ್ವತ್ತಾಗಿದೆ. ತರುವಾಯ, ಆತನು, ಹೆಚ್ಚುವರಿ ಡಿಕ್ರಿದಾರನಾಗಿ ತನ್ನನ್ನು ಸೇರಿಸಲು ಕೋರಿ ಅರ್ಜಿಯನ್ನು ದಾಖಲು ಮಾಡಿದ್ದಾನೆ. ದಿನಾಂಕ 28.7.2011ರಂದು ಮುಖ್ಯ ವಿಚಾರಣೆಯ ಬದಲಾಗಿ ತನ್ನ ಶಪಥಪತ್ರವನ್ನು ದಾಖಲು

ಮಾಡಿದ್ದಾನೆ ಮತ್ತು ಪ್ರಾ.ಸಾ.1 ರಂತೆ ಪರೀಕ್ಷಿಸಲಾಗಿದೆ. ಮೂಲ ಉಯಿಲಿನ ದಿನಾಂಕ 8.4.2010ನ್ನು ಜಾರಿ ಅರ್ಜಿಯಲ್ಲಿ ನಿಶಾನೆ.ಪಿ.1 ರಂತೆ ಗುರುತಿಸಲಾಗಿದೆ ಮತ್ತು ಬರೆದುಕೊಟ್ಟು ಹೇಳಲಾದ ಸ್ಥಿರ ಸ್ವತ್ತಿನ ಭೂ ದಾಖಲೆಗಳನ್ನು, ನಿಶಾನೆ ಪಿ.2 ರಿಂದ 8 ರಂತೆ ಗುರುತಿಸಲಾಗಿದೆ. ಕೃಷ್ಣಮೂರ್ತಿಯ, ದಿನಾಂಕ 08.04.2010ರಂದು ತನ್ನ ಸಹೋದರ ಶಿವಮೂರ್ತಿಯಿಂದ ಬರೆದುಕೊಟ್ಟ ಹೇಳಲಾದ ಉಯಿಲಿನ ಆಧಾರದ ಮೇಲೆ ಸ್ವಾಮ್ಯವನ್ನು ಕ್ಲೇಮು ಮಾಡಿದ್ದಾನೆ. ಸದರಿ ಶಿವಮೂರ್ತಿಯು, ದಿನಾಂಕ 20.04.2010ರಂದು ಮೃತನಾಗಿದ್ದಾನೆ.

17. ***ಬ್ರಾಮ್‌ಡಿಯೊ ಚೌಧರಿ –ವಿರುದ್ಧ– ರಿಷಿಕೇಶ್ ಪ್ರಸಾದ್ ಜೈಸ್‌ವಾಲ್*** **ಮತ್ತು ಇನ್ನೊಬ್ಬರು**[3] ಪ್ರಕರಣದಲ್ಲಿ ನೀಡಲಾದ ತೀರ್ಮಾನದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿರುವಂತೆ, ಆತನು ಮುಂದೆ ಅಗತ್ಯವಾಗಿರದ ಜಾರಿ ವ್ಯವಹರಣೆಗಳ ಯಾವುದೇ ಹಂತದಲ್ಲಿ ಸಂಬಂಧವಿಲ್ಲದವನಾಗಿದ್ದರೂ, ತನ್ನ ಕ್ಲೇಮನ್ನು ಸ್ವಾಧೀನ ತಪ್ಪಿಸಿದ್ದಲ್ಲಿ ಅದನ್ನು ವಿರೋಧಿಸಿ ಅರ್ಜಿ ಸಲ್ಲಿಸಬಹುದೆಂದಿದೆ. ಸದರಿ ತೀರ್ಮಾನದ ಸುಸಂಬದ್ಧ ಪ್ಯಾರಾಗ್ರಾಫ್‌ನ್ನು ಕೆಳಗಿನಂತೆ ಅದರಲ್ಲಿ ಉದ್ಧರಿಸಲಾಗಿದೆ:

> *“. . . . . . . ಡಿಕ್ರಿ ಸ್ವತ್ತಿನಲ್ಲಿ ಸ್ವತಂತ್ರ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಯು ಕ್ಲೇಮಿನ ಡಿಕ್ರಿಗೆ ಸಂಬಂಧವಿಲ್ಲದವನಾಗಿದ್ದರೂ, ವಾಸ್ತವಿಕವಾಗಿ ಪಡೆದುಕೊಂಡ ಸ್ವಾಧೀನ ತಪ್ಪಿಸಿ ಮುಂದೆ ತನ್ನ ಪ್ರತಿರೋಧ ನೀಡಿದ್ದಾನೆ. ಆತನು ತನ್ನ ಕುಂದುಕೊರತೆಯ ಕಾರಣ ಚಳುವಳಿ ನಡೆಸಿದ್ದಾನೆ ಮತ್ತು ಆದೇಶ XXI ಕ್ರಮಾದೇಶ 99ರ ಪ್ರಕಾರ ಕಳೆದುಕೊಂಡ ಸ್ವಾಧೀನದ ತರುವಾಯ ಸಹ ಡಿಕ್ರಿ ಸ್ವತ್ತಿನಲ್ಲಿ ತನ್ನ ಸ್ವತಂತ್ರ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಯನ್ನು ನ್ಯಾಯ ನಿರ್ಣಯ ಮಾಡುವುದಕ್ಕಾಗಿ ಕ್ಲೇಮು ಮಾಡಿದ್ದಾನೆ. ಆದೇಶ XXI*

3. (1997) 3 ಎಸ್‌ಸಿಸಿ 694

*ಕ್ರಮಾದೇಶ 97ನ್ನು ಆ ಹಂತದಲ್ಲಿ ವ್ಯವಹರಿಸಿದ್ದು, ಪ್ರತಿರೋಧಕನ ಅಥವಾ ಕುಂದುಕೊರತೆಯ ಕಾರಣ ಅದರಲ್ಲಿ ಸ್ವಾಧೀನಕ್ಕಾಗಿ ಡಿಕ್ರಿಯ ವಾಸ್ತವಿಕ ಜಾರಿಯ ಮುಂಚೆ, ಡಿಕ್ರಿದಾರನಿಗೆ ಸ್ವಾಧೀನವನ್ನು ವಾಸ್ತವಿಕವಾಗಿ ಒಪ್ಪಿಸುವ ಮುಂಚೆ ಆ ಮೇಲೆ ನ್ಯಾಯನಿರ್ಣಯ ಮಾಡಬಹುದು. ಡಿಕ್ರಿ ಸ್ವತ್ತಿನಲ್ಲಿ ಯಾವುದೇ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಗೆ ಕ್ಲೇಮು ಮಾಡಲು ಸಂಬಂಧವಿಲ್ಲದವ ಅದರಲ್ಲಿ ಜಾರಿಯ ವ್ಯವಹರಣೆಗಳಲ್ಲಿ ತರುವಾಯದ ಹಂತದೊಂದಿಗೆ ಬೇರೊಂದು ರೀತಿಯಲ್ಲಿ ಆದೇಶ XXI ಕ್ರಮಾದೇಶ 99ನ್ನು ವ್ಯವಹರಿಸಿರುವಾಗ, ವಾಸ್ತವಿಕವಾಗಿ ಸ್ವಾಧೀನ ತಪ್ಪಿಸಲು ಮಾಡಲಾಗಿದೆ ಮತ್ತು ಸಾಲ ತೀರಿಸಬೇಕೆಂದು ತೀರ್ಪು ಪಡೆದ ಸಾಲಗಾರನ ಹಿತಾಸಕ್ತಿಯ ಅಪ್ರಸ್ತುತ ತನ್ನ ಸ್ವಾತಂತ್ರ್ಯ ಹಕ್ಕು, ಸ್ವಾಮ್ಯ ಮತ್ತು ಹಿತಾಸಕ್ತಿಯ ನ್ಯಾಯ ನಿರ್ಣಯದ ಮೇಲೆ ಸ್ವಾಧೀನವನ್ನು ವಾಪಸ್ಸು ಕೊಡಲು ಕ್ಲೇಮು ಮಾಡಲಾಗಿದೆ. ಡಿಕ್ರಿಗೆ ಸಂಬಂಧವಿಲ್ಲದವನ ಹಕ್ಕು ಸ್ವಾಮ್ಯ ಮತ್ತು ಹಿತಾಸಕ್ತಿಯೊಂದಿಗಿನ ಸಂಬಂಧದಲ್ಲಿನ ವಿಚಾರಣೆಗಳ ಈ ಎರಡೂ ವಿಧಾನಗಳು, ಆದೇಶ XXIರ ಈ ಹಿಂದಿನ ಯೋಜನೆಯಿಂದ ಸ್ಪಷ್ಟವಾಗಿ ಉದ್ದೇಶಿಸಲಾಗಿದೆ ಮತ್ತು ಸ್ವಾಧೀನ ನಷ್ಟದ ತರುವಾಯ ಅಂತಿಮ ಹಂತದಲ್ಲಿ ಮಾತ್ರ ಚಿತ್ರದಲ್ಲಿ ಬಂದಿರುವ ಡಿಕ್ರಿಗೆ ಹಾಗೆಯೇ ಸಂಬಂಧಪಡಲಾಗದು ಮತ್ತು ಆತನ ವಿರುದ್ಧ ವಾಸ್ತವಿಕವಾಗಿ ಬರೆದುಕೊಡಲಾದ ಸ್ವಾಧೀನ ಪಡೆದುಕೊಳ್ಳುವುದಕ್ಕಾಗಿ ವಾರಂಟು ಮುಂಚೆ ತನ್ನ ಆಕ್ಷೇಪಣೆ ಮತ್ತು ಅಡೆತಡೆಗಳ ಬಗ್ಗೆ ಎತ್ತಲಾಗಿದ್ದರೂ ಆತನು ಆ ಮುಂಚೆ ಜಾಗೃತನಾಗಿರುವುದಿಲ್ಲ".*

18. ***ಘಾಸಿರಾಮ್ –ವಿರುದ್ಧ– ಚೈತ್‌ರಾಂ ಸೈನಿ*** [4], ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯ, ಸಿಪಿಸಿ ಮತ್ತು ತಿದ್ದುಪಡಿಯ ಸಂದರ್ಭದಂತೆ 1976ರಲ್ಲಿ ತರಲಾದ ತಿದ್ದುಪಡಿಗೆ ಮುಂಚಿನ ಉಪಬಂಧಗಳ ವಿಭಿನ್ನವಾಗಿ ಮಾಡಿರುವುದು ಸ್ಪಷ್ಟವಾಗಿದೆ. ಸದರಿ ತೀರ್ಮಾನದ ಪ್ಯಾರಾಗ್ರಾಫ್ 7ನೇ ಭಾಗ ಸುಸಂಬದ್ಧವಾಗಿದೆ ಮತ್ತು ಅದನ್ನು ಕೆಳಗಿನಂತೆ ಇದರಲ್ಲಿ ಉದ್ಧರಿಸಲಾಗಿದೆ:

> *"7. . . . . . . . . ಈ ಸ್ಥಿತಿಯನ್ನು 1976ರ ತಿದ್ದುಪಡಿ ಅಧಿನಿಯಮದ ಮೂಲಕ ಸಿವಿಲ್ ಪ್ರಕ್ರಿಯಾ ಸಂಹಿತೆಯ ತಿದ್ದುಪಡಿಯ ತರುವಾಯ ಬದಲಾವಣೆ ಮಾಡಲಾಗಿದೆ. ಈಗ, ತಿದ್ದುಪಡಿ ಮಾಡಲಾದ ಉಪಬಂಧಗಳ ಅಡಿಯಲ್ಲಿ ಎಲ್ಲಾ ಪ್ರಶ್ನೆಗಳು, 97ನೇ ನಿಯಮದ ಅಡಿಯಲ್ಲಿನ ವ್ಯವಹರಣೆಗಳಿಗೆ ಪಕ್ಷಕಾರರ ನಡುವೆ ಉದ್ಭವಿಸಿದ ಈ ಸ್ವತ್ತಿನಲ್ಲಿ ಹಕ್ಕು, ಸ್ವಾಮ್ಯ ಹಿತಾಸಕ್ತಿಗಳು ಸೇರಿದಂತೆ ಸ್ವತಃ ಜಾರಿ ನ್ಯಾಯಾಲಯದಿಂದ ನ್ಯಾಯ ನಿರ್ಣಯಿಸಬಹುದು ಮತ್ತು ಹೊಸ ದಾವೆಯ ರೀತಿಯಲ್ಲಿ ತೀರ್ಮಾನಿಸುವುದನ್ನು ಕೈ ಬಿಡಲಾಗಿದೆ".*

19. ***ಬ್ರಾಮ್‌ಡಿಯೊ ಚೌಧರಿ ಮತ್ತು ಘಾಸಿ ರಾಮ್*** ಪ್ರಕರಣದಲ್ಲಿ ನೀಡಲಾದ ತೀರ್ಮಾನಗಳನ್ನು, ***ಸಮೀರ್ ಸಿಂಗ್ ಮತ್ತು ಇನ್ನೊಬ್ಬರು –ವಿರುದ್ಧ– ಅಬ್ದುಲ್ ರಾಬ್ ಮತ್ತು ಇತರರು*** [5] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಅನುಸರಿಸಲಾಗಿದೆ. ***ಸಮೀರ್ ಸಿಂಗ್*** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಅನುಸಾರವಾಗಿ, ಈ ನ್ಯಾಯಾಲಯ, ಪಕ್ಷಕಾರರ ನಡುವೆ ಉದ್ಭವಿಸಿದ ಸ್ವತ್ತಿನಲ್ಲಿ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಗೆ ಸಂಬಂಧಿಸಿದಂತೆ ಈ ಎಲ್ಲಾ ಪ್ರಶ್ನೆಗಳನ್ನು ನ್ಯಾಯ ನಿರ್ಣಹಿಸುವ ಅಧಿಕಾರವಿದೆಯೆಂದು ಹೇಳಿದ್ದಾರೆ ಮತ್ತು ಸ್ವಾಧೀನ

4. (1998) 6 ಎಸ್‌ಸಿಸಿ 200
5. (2015) 1 ಎಸ್‌ಸಿಸಿ 379

ತಪ್ಪಿಸುವುದನ್ನು ಗ್ರಹಿಸುವ ಸಂಬಂಧಪಡದವನ ಕ್ಲೇಮು ಸಹ ಸೇರಿದಂತೆ ಅಥವಾ ಈಗಾಗಲೇ, ಸ್ಥಿರ ಸ್ವತ್ತಿನಿಂದ ಸ್ವಾಧೀನ ತಪ್ಪಿಸಲಾಗಿದೆ. ಪಟ್ಟಿಯನ್ನು ನ್ಯಾಯ ನಿರ್ಣಯಿಸುವುದಕ್ಕೆ ಜಾರಿ ನ್ಯಾಯಾಲಯದ ಆದೇಶದ ಮೂಲಕ ನಿಷೇಧಿಸಿದ ಸ್ವತಃ ಸಂಹಿತೆಯನ್ನೊಳಗೊಂಡಿದೆ ಮತ್ತು ಈ ಉದ್ದೇಶವನ್ನು ವ್ಯವಹರಣೆಗಳ ಬಾಹುಳ್ಯತೆಯನ್ನು ನಿಯಂತ್ರಿಸಲಾಗಿದೆ ಎಂಬುದನ್ನು ತದನಂತರ ಸ್ಪಷ್ಟವಾಗಿ ಮಾಡಲಾಗಿದೆ. 1976ರ ತಿದ್ದುಪಡಿಗೆ ಮುಂಚೆ ಕುಂದು ಕೊರತೆಯ ಕಾರಣ ದಾವೆಯನ್ನು ದಾಖಲಿಸುವುದರ ಮೂಲಕ ಮಾತ್ರ ಚಳುವಳಿ ನಡೆಸಬಹುದಾದಂತೆ ಅಗತ್ಯಪಡಿಸಲಾಗಿದೆ; ಆದರೆ ತಿದ್ದುಪಡಿಯ ತರುವಾಯ, ಇಡೀ ವಿಚಾರಣೆಯನ್ನು ಜಾರಿ ನ್ಯಾಯಾಲಯದಿಂದ ನಡೆಸಬಹುದಾಗಿದೆ. XXIನೇ ಕ್ರಮಾದೇಶದ 101ನೇ ನಿಯಮವನ್ನು ಅಗತ್ಯ ವಿವಾದಾಂಶಗಳನ್ನು ನಿರ್ಧರಿಸುವುದಕ್ಕಾಗಿ ಉಪಬಂಧಿಸಲಾಗಿದೆ. ಅರ್ಜಿಯನ್ನು, ಸದರಿ ಆದೇಶದ ನಿಯಮ 98 ಅಥವಾ ನಿಯಮ 100ರ ಮೇಲೆ ನ್ಯಾಯ ನಿರ್ಣಯಿಸಿರುವಾಗ ಅದು ಡಿಕ್ರಿಯಲ್ಲಿರುವಂತೆ ಜಾರಿಯಾಗತಕ್ಕದ್ದೆಂಬುದನ್ನು 103ನೇ ನಿಯಮ ಸ್ಪಷ್ಟವಾಗಿ ಗೊತ್ತುಪಡಿಸಿದೆ.

20. ಪ್ರಸ್ತುತ ಪ್ರಕರಣದಲ್ಲಿ, ಕೃಷ್ಣಮೂರ್ತಿಯು, ಜಾರಿ ಅರ್ಜಿಯ ಷೆಡ್ಯೂಲ್ ಸ್ವತ್ತಿನ ಸಂಬಂಧದಲ್ಲಿ ಮಾತ್ರವಲ್ಲದೆ ಸ್ಥಿರ ಸ್ವತ್ತುಗಳ ಉಳಿದಿರುವ 9 ಸ್ವತ್ತುಗಳ ಸಂಬಂಧದಲ್ಲಿಯೂ ಸಹ ಬರೆದುಕೊಟ್ಟದ್ದೆಂದು ಹೇಳಲಾದ ನೋಂದಾಯಿತವಲ್ಲದ ಉಯಿಲಿನ ಆಧಾರದ ಮೇಲೆ ಸ್ವಾಮ್ಯದ ಹಕ್ಕನ್ನು ಕ್ಲೇಮು ಮಾಡಿದ್ದಾರೆ. ಜಾರಿ ಅರ್ಜಿಯನ್ನು ದಾಖಲು ಮಾಡಿದ ಆರು ದಿನಗಳ ಮರಣ ಪತ್ರದ ಉಯಿಲಿನ ಆಧಾರದ ಮೇಲೆ ಸ್ವಾಮ್ಯದ ಘೋಷಣೆಯನ್ನು ಕೋರಿ ಆತನು ದಾವೆಯನ್ನು ದಾಖಲು ಮಾಡಿದ್ದಾನೆಂಬುದು ಸತ್ಯವಾಗಿದೆ.

21. ಮೇಲೆ ಹೇಳಲಾದ ***ಬ್ರಾಮ್‌ಡಿಯೊ ಚೌಧರಿ*** ಪ್ರಕರಣ ಮತ್ತು ***ಸಮೀರ್ ಸಿಂಗ್*** ಪ್ರಕರಣದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಹೇಳಿದಂತೆ, ಉಯಿಲಿನ ಸ್ವರೂಪದ ಪಟ್ಟಿಯನ್ನು ಜಾರಿ ನ್ಯಾಯಾಲಯದಲ್ಲಿ ತೀರ್ಮಾನಿಸಬಹುದು ಮತ್ತು ಪ್ರತ್ಯೇಕ ದಾವೆಯ ಮೂಲಕವಲ್ಲ. ಆದ್ದರಿಂದ ಆತನು, ತನ್ನ ಹೆಸರಿನಲ್ಲಿ

ಬರೆದುಕೊಟ್ಟಿದೆಯೆಂದು ಹೇಳಲಾದ ಉಯಿಲಿನ ಆಧಾರದ ಮೇಲೆ ನಾದಿನಿಯ ಕ್ಲೇಮನ್ನು ವಿರೋಧಿಸಿ ಜಾರಿ ನ್ಯಾಯಾಲಯದಲ್ಲಿ ದಾಖಲೆ ಮೇಲೆ ಬರಲು ನಿರ್ಧರಿಸಿದ್ದಾನೆ.

22. ಇದಲ್ಲದೇ ಆತನು, ಈಗಾಗಲೇ ಮುಖ್ಯ ವಿಚಾರಣೆಯಲ್ಲಿ ತನ್ನ ಸಾಕ್ಷ್ಯ ನೀಡಿದ್ದಾನೆ ಮತ್ತು ಅವನಿಂದ ಮೇಲೆ ಅವಲಂಬಿಸಿರುವ ಉಯಿಲಿನಲ್ಲಿ ಸೇರಿಸಿದ ಸುಸಂಬದ್ಧ ದಾಖಲೆಗಳನ್ನು ಗುರುತು ಮಾಡಲಾಗಿದೆ. ಜಾರಿ ಅರ್ಜಿಯ ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿ ಕೃಷ್ಣಮೂರ್ತಿಯಾಗಲಿ, ಡಿಕ್ರಿದಾರರಾಗಲಿ, ಸ್ವಾಧೀನದಲ್ಲಿರುವುದಿಲ್ಲ. ಜಾರಿ ಅರ್ಜಿ ಷೆಡ್ಯೂಲ್ ಸ್ವತ್ತಿನ ಸ್ವಾಧೀನದಲ್ಲಿರುವ ವ್ಯಕ್ತಿಯು, ಜಿಪಿಎ ಡಿಕ್ರಿದಾರನಾದ ತೀರ್ಪು ಋಣಿಯಾಗಿದ್ದಾನೆ. ಆದ್ದರಿಂದ, ಅದರಲ್ಲಿನ ಡಿಕ್ರಿದಾರರು/ಅರ್ಜಿದಾರರು, ಅದರಲ್ಲಿ ಅರ್ಜಿದಾರರ ನಡುವೆ ಮಾಡಿಕೊಂಡ ರಾಜಿಯ ನಿಬಂಧನೆಗಳ ಪ್ರಕಾರ ತನ್ನ ಹೆಸರಿನಲ್ಲಿ ಕ್ರಯಪತ್ರವನ್ನು ಬರೆದುಕೊಟ್ಟ ಜಿಪಿಎದಾರನಿಗೆ ನಿರ್ದೇಶಿಸುವಂತೆ ಜಾರಿ ನ್ಯಾಯಾಲಯವನ್ನು ಕೋರಿ ಜಾರಿ ಅರ್ಜಿಯನ್ನು ದಾಖಲು ಮಾಡಿದ್ದಾನೆ ಮತ್ತು ಮೂಲದಾವೆ ಸಂಖ್ಯೆ. 674/2008ನ್ನು ಹೊಂದಿದ ದಾವೆಯಲ್ಲಿ ತೀರ್ಪು ಋಣಿಗೆ ಅದನ್ನು ದಿನಾಂಕ 04.01.2010ರಂದು ಜಾರಿ ಮಾಡಲಾಗಿದೆ.

23. ***ಶ್ರೀನಾಥ್ ಮತ್ತು ಇನ್ನೊಬ್ಬರು –ವಿರುದ್ಧ– ರಾಜೇಶ್ ಮತ್ತು ಇತರರು*** [6] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ, "ಯಾರೇ ವ್ಯಕ್ತಿ" ಎಂಬ ಪದಗಳ ಬಗ್ಗೆ ವಿವರಿಸಲಾಗಿದ್ದು, ಸಿಪಿಸಿಯ ಆದೇಶ 97ರ ಉಪಖಂಡ (1)ರ ಅಡಿಯಲ್ಲಿ ಕಂಡು ಬರುತ್ತದೆ. 'ಯಾರೇ ವ್ಯಕ್ತಿ' ಎಂಬ ಪದವನ್ನು ಜಾರಿ ನ್ಯಾಯಾಲಯ, 21ನೇ ಕ್ರಮಾದೇಶ 97ನೇ ನಿಯಮದ ಅಡಿಯಲ್ಲಿ ಅಂಥ ಯಾವುದೇ ಅರ್ಜಿಯಲ್ಲಿ ಮಾಡಿದ ಕ್ಲೇಮನ್ನು ನ್ಯಾಯ ನಿರ್ಣಯಿಸಲಾಗಿದೆಯೆಂಬ ಅಧಿಕಾರ ವ್ಯಾಪ್ತಿಯನ್ನು ಬೇಕೆಂದೇ ವಿಸ್ತರಿಸಿ ಉಪಯೋಗಿಸಿಕೊಳ್ಳಲಾಗಿದೆಯೆಂದು ಅಭಿಪ್ರಾಯಪಟ್ಟಿದೆ.

6. ಎಐಆರ್ 1998 ಎಸ್‌ಸಿ 1827(1)

ಹೀಗಾಗಿ, ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಅನುಸಾರವಾಗಿ ಸ್ವಾಧೀನ ಒಪ್ಪಿಸುವುದನ್ನು ವಿರೋಧಿಸಿದ ಅದರ ಎಲ್ಲಾ ವ್ಯಕ್ತಿಗಳು ಸೇರಿದಂತೆ 'ಯಾರೇ ವ್ಯಕ್ತಿ' ಎಂಬ ಪದಗಳನ್ನು ಉಪಯೋಗಿಸಿಕೊಳ್ಳುವುದರ ಮೂಲಕ, ಈ ಡಿಕ್ರಿದಾರನಿಂದ ಬದ್ಧನಾಗಿಲ್ಲದಿದ್ದರೂ ಸಹ ಆ ಸ್ವತ್ತಿನಲ್ಲಿ ಹಕ್ಕನ್ನು ಕ್ಲೇಮು ಮಾಡಲಾಗಿದೆ. ಗೇಣಿದಾರರು ಅಥವಾ ಸಂಬಂಧಪಡದವನು ಸೇರಿದಂತೆ ತಮ್ಮ ಸ್ವಂತಿಕೆಯ ಮೇಲೆ ಹಕ್ಕನ್ನು ಕ್ಲೇಮು ಮಾಡಿದ ಇತರೇ ವ್ಯಕ್ತಿಗಳು ಸೇರಿದ್ದಾರೆ. ಒಬ್ಬ ವ್ಯಕ್ತಿಯು ಅಗತ್ಯವಾಗಿ, ಆತನು, ಸಿಪಿಸಿಯ 21ನೇ ಕ್ರಮಾದೇಶ 98ನೇ ನಿಯಮದ ಅಡಿಯಲ್ಲಿ ಕ್ಲೇಮು ಪರಿಹಾರಕ್ಕೆ ಸ್ವಾಧೀನಪಡಿಸುವವರೆಗೆ ಕಾಯಬಾರದು. ಕೃಷ್ಣಮೂರ್ತಿಯು, ಆತನು ಸ್ವತಃ ಸ್ವಾಮ್ಯವನ್ನು ಕ್ಲೇಮು ಮಾಡಲು ದಾಖಲೆ ಮೇಲೆ ಬಂದಿದ್ದು, ನ್ಯಾಯಾಲಯ, ಸಿಪಿಸಿಯ ನಿಯಮ 97ರ ಕ್ರಮಾದೇಶ 21ರ ಅಡಿಯಲ್ಲಿ ದಾಖಲು ಮಾಡಿದ ಒಂದರಂತೆ ಸದರಿ ಅರ್ಜಿಯನ್ನು ಪರಿಗಣಿಸಿದೆಯೆಂಬುದು ವಾಸ್ತವವಾದ ಸಂಗತಿಯಾಗಿದೆ.

24. ಸಿಪಿಸಿಯ ಆದೇಶ 21 ಕ್ರಮಾದೇಶ 97ರಲ್ಲಿ ಉಪಯೋಗಿಸಲಾದ 'ಯಾರೇ ವ್ಯಕ್ತಿ' ಎಂಬ ಪದವು ತೀರ್ಪು ಋಣಿಯು ತಮ್ಮ ಹಕ್ಕು ಸ್ವಾಮ್ಯ ಅಥವಾ ಹಿತಾಸಕ್ತಿಯನ್ನಾಗಲಿ ಅವರು ಪಡೆದಿರಲಿ ಅಥವಾ ಇಲ್ಲದಿರಲಿ ಆ ವ್ಯಕ್ತಿಗಳೇ ಒಪ್ಪಿಕೊಳ್ಳುತ್ತಾರೆಂದು ಸ್ಪಷ್ಟವಾಗಿ ಹೇಳಲಾಗಿದೆ. ಈ ನ್ಯಾಯಾಲಯ, ಅಲ್ಲದೆ, ಸ್ಥಿರ ಸ್ವತ್ತಿನ ಸ್ವಾಧೀನವನ್ನು ಪಡೆದುಕೊಳ್ಳಲು ಅಂಥ ವ್ಯಕ್ತಿಯಿಂದ ಅಡ್ಡಿಯನ್ನಾಗಲಿ ಖಚಿತಪಡಿಸಿಕೊಳ್ಳಲು ವಿಚಾರಣೆ ನಡೆಸುವುದಕ್ಕೆ ನಿಯಮ 35(3)ರ ಅಡಿಯಲ್ಲಿ ಸಶಸ್ತ್ರ ಅಧಿಕಾರದೊಂದಿಗೆ, ಕಾನೂನಿಗನುಸಾರವಾಗಿದೆ ಅಥವಾ ವಾಗಿರುವುದಿಲ್ಲ; ಮೂರನೇ ವ್ಯಕ್ತಿಗಳ ವಿರುದ್ಧ ವಿಚಾರಣೆ ನಡೆಸುವುದಕ್ಕೆ ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಆ ಹಕ್ಕಿನ ಡಿಕ್ರಿದಾರನ ಮೇಲೆ 97ನೇ ನಿಯಮವು ಹಕ್ಕನ್ನು ನೀಡಲಾಗಿದೆ ಮತ್ತು ಅಡ್ಡಿಯನ್ನು ತೆಗೆದುಹಾಕಲಾಗಿದೆ; ಹಾಗೂ ಪ್ರತಿಯೊಂದು ಅಡ್ಡಿ ಅಥವಾ ಈ ನ್ಯಾಯಾಲಯವನ್ನು ಕೋರಿ ಹೊಸ

ವ್ಯಾಜ್ಯಕಾರಣವನ್ನು ಡಿಕ್ರಿದಾರನಿಗೆ ನೀಡುವುದನ್ನು ವಿರೋಧಿಸಿದ್ದು, ***ಬನವರ್‌ಲಾಲ್ –ವಿರುದ್ಧ– ಸತ್ಯನ್‌ರೈನ್*** [7] ಪ್ರಕರಣದಲ್ಲಿ ಅಭಿಪ್ರಾಯ ಪಟ್ಟಿದೆ.

25. ***ಬಾಬುಲಾಲ್ –ವಿರುದ್ಧ– ರಾಜ್ ಕುಮಾರ್*** [8] ಪ್ರಕರಣದಲ್ಲಿ ಬರುವ ಪ್ರಕರಣದ ಸಂಗತಿಗಳ ಪ್ರಕಾರ ಸಹ ಮಾರಾಟ ಒಪ್ಪಂದದ ನಿರ್ದಿಷ್ಟ ಪಾಲನೆಗಾಗಿ ಡಿಕ್ರಿಯನ್ನು ಜಾರಿಗೊಳಿಸಿ ಸ್ವಾಧೀನ ಒಪ್ಪಿಸುವುದಕ್ಕಾಗಿ, ಜಾರಿ ಅರ್ಜಿಯನ್ನು ದಾಖಲು ಮಾಡಲಾಗಿದೆ. ಆಕ್ಷೇಪಣೆಗಳನ್ನು ಡಿಕ್ರಿಗೆ ಪಕ್ಷಕಾರನಾಗಿರದ ವ್ಯಕ್ತಿಯಿಂದ ಎತ್ತಲಾಗಿದೆ ಮತ್ತು ಆಕ್ಷೇಪಣಾಕಾರನು ಸ್ವಾಧೀನ ಕಳೆದುಕೊಂಡವನಲ್ಲವನಾಗದೇ ಇರುವುದರಿಂದ, 21ನೇ ಕ್ರಮಾದೇಶ 97ನೇ ನಿಯಮದ ಅಡಿಯಲ್ಲಿ ದಾಖಲು ಮಾಡಿದ ಆತನ ಅರ್ಜಿಯ ಊರ್ಜಿತ ಯೋಗ್ಯವಾಗಿರುವುದಿಲ್ಲ ಮತ್ತು ಕಾನೂನು ಬಾಹಿರವಾಗಿದೆ ಎಂಬ ಕಾರಣದ ಮೇಲೆ ಸದರಿ ಅರ್ಜಿಯನ್ನು ಕಾರ್ಯ ನಿರ್ವಾಹಕ ನ್ಯಾಯಾಲಯ ವಜಾಗೊಳಿಸಿದೆ. ಕ್ರಮಾದೇಶ 21ರ ನಿಯಮ 35(3)ರ ಅಡಿಯಲ್ಲಿ ದಾಖಲು ಮಾಡಿದ ಅರ್ಜಿಯನ್ನು ಸಹ ಅಥವಾ 47ನೇ ಪ್ರಕರಣದ ಅಡಿಯಲ್ಲಿ ದಾಖಲು ಮಾಡಿದ ಒಂದನ್ನು, ಸಿಪಿಸಿಯ 21ನೇ ಕ್ರಮಾದೇಶ 97ನೇ ನಿಯಮದ ಅಡಿಯಲ್ಲಿ ಅರ್ಜಿಯನ್ನು ಪರಿಗಣಿಸಬಹುದೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿರುವುದರಿಂದ, ಸದರಿ ವಿವಾದವು, ದೀರ್ಘಾವಧಿ ಪೂರ್ವ ನಿದರ್ಶನ ರಹಿತ ವಿಷಯವಾಗಿರುವುದಿಲ್ಲ ಮತ್ತು ನ್ಯಾಯ ನಿರ್ಣಯ ಮಾಡಲಾಗಿದ್ದು ಅಗತ್ಯಪಡಿಸಲಾದಂತೆ, ಸಿಪಿಸಿಯ 21ನೇ ಕ್ರಮಾದೇಶದ 98ನೇ ನಿಯಮದ ಅಡಿಯಲ್ಲಿ ನಡೆಸಬಹುದೆಂದು ಅಭಿಪ್ರಾಯಪಟ್ಟಿದೆ.

26. ***ಪ್ರಶಾಂತ ಬ್ಯಾನರ್ಜಿ –ವಿರುದ್ಧ– ಪುಷ್ಪ ಅಶೋಕೆ ಚಾಂದನಿ*** [9] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ, ಜಾರಿ ವ್ಯವಹರಣೆಗಳನ್ನು ಪ್ರಾರಂಭಿಸಿದ ತರುವಾಯ, ಡಿಕ್ರಿಗೆ ಪಕ್ಷಕಾರನಾಗಿರದ ಅಪೀಲುದಾರನಿಂದ ದಾಖಲು ಮಾಡಿದ

7. ಎಐಆರ್ 1995 ಎಸ್‌ಸಿ 358
8. ಎಐಆರ್ 1996 ಎಸ್‌ಸಿ 2050
9. ಎಐಆರ್ 2000 ಎಸ್‌ಸಿ 3567(II)

ಸ್ವತ್ತಿನ ಅದೇ ವಿಷಯಕ್ಕೊಳಪಟ್ಟ ಸಂಬಂಧದಲ್ಲಿನ ದಾವೆಯು, ಊರ್ಜಿತ ಯೋಗ್ಯವಾಗಿರುವುದಿಲ್ಲ; ಆದರೆ ಅಪೀಲುದಾರನು, ಅಂಥ ಎಲ್ಲಾ ಕಾನೂನುಬದ್ಧ ಉಪ ಗೇಣಿದಾರಿಕೆ ಅಥವಾ ಜಾರಿ ವ್ಯವಹರಣೆಗಳಲ್ಲಿ ತನ್ನ ಯಾವುದೇ ಹಕ್ಕನ್ನು ಕೇಳಲು ಹಕ್ಕುಳ್ಳವನಾಗಿರುತ್ತಾನೆ. ಕೃಷ್ಣಮೂರ್ತಿಯು, ಜಾರಿ ಅರ್ಜಿಯನ್ನು ದಾಖಲು ಮಾಡಲು ಆರು ದಿನಗಳ ತರುವಾಯ ದಾವೆಯನ್ನು ದಾಖಲು ಮಾಡಲು ನಿರ್ಧರಿಸಿದ್ದರೂ, ಜಾರಿ ನ್ಯಾಯಾಲಯದಲ್ಲಿ ತನ್ನ ಕುಂದು ಕೊರತೆಗಳನ್ನು ಮಂಡಿಸುವುದಕ್ಕೆ ಅಡ್ಡಿಯಾಗಿರುವುದಿಲ್ಲ.

27. ಅದೇ ಹಿನ್ನೆಲೆಯಲ್ಲಿ, ಅಧಿವಿಚಾರಣಾ ನ್ಯಾಯಾಲಯ, ಈ ಪ್ರಕರಣವನ್ನು ವಿರೋಧಿಸಿದ ಶ್ರೀ ಕೃಷ್ಣಮೂರ್ತಿಗೆ ಅವಕಾಶ ನೀಡಿರುವುದನ್ನು ಸಮರ್ಥಿಸಿಕೊಂಡಿದೆ ಮತ್ತು ಆತನಿಂದ ಕ್ಲೇಮು ಮಾಡಿದ ಸ್ವಾಮ್ಯದ ಆಧಾರದ ಮೇಲೆ ಉಯಿಲು ರುಜುವಾತಿಗೆ ಪೂರಕವಾಗಿ ಇಬ್ಬರು ಸಾಕ್ಷಿದಾರರನ್ನು ಪರೀಕ್ಷಿಸಲಾಗಿದೆ. ಆತನು, ಮೂಲ ದಾವೆಗೆ ಪಕ್ಷಕಾರನಾಗಿಲ್ಲದಿದ್ದರೂ, ಅದೇ ಸ್ವತ್ತಿಗೆ ಸಂಬಂಧಿಸಿದಂತೆ ಆತನ, ಉಯಿಲಿನ ಆಧಾರದ ಮೇಲೆ ಜಾರಿ ನ್ಯಾಯಾಲಯದಲ್ಲಿ ಆತನ ಕುಂದುಕೊರತೆಯನ್ನು ನ್ಯಾಯ ನಿರ್ಣಯಕ್ಕಾಗಿ ಸಲ್ಲಿಸಬಹುದಾಗಿದೆ.

28. ಭಾರತೀಯ ಉತ್ತರಾಧಿಕಾರ ಅಧಿನಿಯಮದ 63ನೇ ಪ್ರಕರಣ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮದ 68ನೇ ಪ್ರಕರಣದ ಅಡಿಯಲ್ಲಿನ ನಿರ್ಬಂಧನೆಗಳಲ್ಲಿರುವಂತೆ ಈ ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ಉಯಿಲನ್ನು ರುಜುವಾತುಪಡಿಸುವ ಜವಾಬ್ದಾರಿಯು ಪ್ರತಿಪಾದಕನ ಮೇಲೆ ಯಾವಾಗಲೂ ಇರುತ್ತದೆಂದು ಪುನರುಚ್ಚರಿಸುವ ಅಗತ್ಯವಿರುವುದಿಲ್ಲ.

29. ***ಸಮೀರ್ ಸಿಂಗ್*** ಪ್ರಕರಣ ಮತ್ತು ***ಬ್ರಾಮ್‌ಡಿಯೋ ಚೌಧರಿ*** ಪ್ರಕರಣದಲ್ಲಿ ನೀಡಲಾದ ತೀರ್ಮಾನಗಳ ಆಧಾರ ಪೂರ್ವಕ ಘೋಷಣೆಯ ಹಿನ್ನೆಲೆಯಲ್ಲಿ, ಜಾರಿ ನ್ಯಾಯಾಲಯ ಅಳವಡಿಸಿಕೊಂಡಿರುವ ಈ ಕ್ರಮವನ್ನು ಕಾನೂನು

ಬಾಹಿರವೆಂದಾಗಲಿ ಮತ್ತು ವ್ಯತಿರಿಕ್ತವೆಂದಾಗಲಿ ಪರಿಗಣಿಸಲಾಗದು. ಅಧಿಕಾರ ವ್ಯಾಪ್ತಿಯ ದೋಷ ಕಂಡು ಬರುವುದಿಲ್ಲ. ಹಾಗಾಗಿ, (ಎ)ಅಂಶವನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ ಮತ್ತು ಈ ಅರ್ಜಿಗಳು ವಜಾಗೊಳಿಸುವುದಕ್ಕೆ ಅರ್ಹವಾಗಿರುತ್ತದೆ.

**ಆದೇಶ**

ಈ ಅರ್ಜಿಗಳನ್ನು ವಜಾಗೊಳಿಸಲಾಗಿದೆ.

ಜಾರಿ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಯಾವುದೇ ಅನುಚಿತ ವಿಳಂಬ ಮಾಡದೇ ಆ ವಿಷಯವನ್ನು ವಿಲೇ ಮಾಡತಕ್ಕದ್ದು.